ಈ) ಎಲ್ಲಾ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಉನ್ನತೀಕರಿಸುವ ಕಾರ್ಯಕ್ರಮ ಇಲಾಖೆಯಲ್ಲಿರುತ್ತವೆ ಇದಕ್ಕೆ ಯಾವುದೇ ಕಾಲಮಿತಿ ಹಾಕಿಕೊಳ್ಳಲಾಗಿಲ್ಲ ಆದರೆ ಪಶುವೈದ್ಯ ಪದವೀಧರರ ಲಭ್ಯತೆ ಅನುಗುಣವಾಗಿ ವರ್ಷ ವರ್ಷ ಕೆಲವು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಉನ್ನತೀಕರಣ ಮಾಡಲು ಕ್ರಮವಹಿಸಲಾಗುತ್ತಿದೆ ಪ್ರಸ್ತುತ 150 ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಉನ್ನತೀಕರಿಸಲು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಹಣಕಾಸು ಇಲಾಖೆಯ ಅನುಮೋದನೆ ನಿರೀಕ್ಷಿಸಲಾಗಿದೆ

ಉ) ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಯಾವುದೇ ಔಷಧಿಗಳಿಗೆ ಹಣ ಪಡೆದುಕೊಳ್ಳಲಾಗುವುದಿಲ್ಲ ಎಲ್ಲಾ ಸೇವೆ ಉಚಿತ ಆದರೆ ಕೃತಕ ಗರ್ಭಧಾರಣೆಗೆ ಮಾತ್ರ ಪ್ರತಿ ವೀರ್ಯ ನಳಿಗೆಗೆ ರೂ 5 00 ಶುಲ್ಕ ಪಡೆದುಕೊಳ್ಳಲಾಗುತ್ತದೆ

ಊ) ಜಮಖಂಡಿ ತಾಲ್ಲೂಕಿನಲ್ಲಿ ಈ ಕೆಳಕಂಡ ಗ್ರಾಮಗಳಲ್ಲಿ ಪಶುಚಕಿತ್ಸಾಲಯ ಪ್ರಾರಂಭಿಸಲು ಪ್ರಸ್ತಾವನೆ ಬಂದಿದೆ

1 ಖಾಜಿ ಬೀಳಗಿ
2 ನಸಾಲಟ್ಟಿ
3 ಮದರಖಂಡಿ
4 ಲಿಂಗನೂರು
5 ಹುನ್ನೂರ
6 ಕೆಲಬೀಳಗೆ
7 ಹಿರೆಪಡಸಲಗಿ

ಡಾ ಡಿ ಎಂ ನಂಜುಂಡಪ್ಪ ವರದಿ ಆಧಾರದ ಮೇಲೆ ಮುಂದುವರಿದ ತಾಲ್ಲೂಕಾಗಿದ್ದು 1,18,599 ಜಾನುವಾರು ಘಟಕಗಳಿದ್ದು ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುಚಿಕಿತ್ಸಾಲಯದಂತೆ 24 ಪಶುವೈದ್ಯ ಸಂಸ್ಥೆಗಳು ಇರಬೇಕಿತ್ತು ಆದರೆ ಈಗಾಗಲೇ 24 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಆದ್ದರಿಂದ ಹೊಸ ಪಶುಚಿಕಿತ್ಸಾಲಯ ಪ್ರಾರಂಭಿಸಲು ಅವಕಾಶವಿರುವುದಿಲ್ಲ

ಋ) ಜಮಖಂಡಿ ತಾಲ್ಲೂಕಿನಲ್ಲಿ ಯಾವುದೇ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದಿಲ್ಲ ಆದರೆ ಮರಗುದ್ದಿ, ನಾವಳಗಿ ಹಾಗೂ ಚುಂಚನೂರು ಪಶು ಚಕಿತ್ಸಾಲಯಗಳಿಗೆ ಕಟ್ಟಡಗಳಿರುವುದಿಲ್ಲ ಪ್ರಸಕ್ತ ಸಾಲಿನಲ್ಲಿ RIDF XIರ ಅಡಿಯಲ್ಲಿ ಹೊಸಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದ್ದು ಕೆಲಸ ಪ್ರಾರಂಭಿಸಬೇಕಾಗಿದೆ ಈ ಬಾಬ್ತು ಬಾಗಲಕೋಟೆ ಜಿಲ್ಲೆಗೆ ರೂ 49 72 ಲಕ್ಷಗಳ ಅನುದಾನ ಬಿಡುಗಡೆಗೆ ಆದೇಶ ಮಾಡಲಾಗಿದೆ

99 (167) ಶ್ರೀ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಾತಿ ಆಧಾರವನ್ನು ಪರಿಗಣನೆಗೆ ತೆಗೆದುಕೊಳ್ಳುವುದರಿಂದ ಸಮಾಜ ಎಲ್ಲಾ ದುರ್ಬಲ ವರ್ಗದವರಿಗೆ ನೀಡುವ ಸೌಲಭ್ಯವನ್ನು ಸಮನಾಗಿ ಮತ್ತು ಸಮರ್ಪಕವಾಗಿ ದೊರೆಯಬೇಕಾಗಿದ್ದು, ಇತರೆ ಎಲ್ಲಾ ಜಾತಿಯ ಸಮುದಾಯಕ್ಕೆ ಅನ್ವಯವಾಗದೇ ಇರುವುದು ಸರ್ಕಾರದ ಗಮನದಲ್ಲಿದೆಯೇ ,

ಆ) ಹಾಗಿಲ್ಲದಿದ್ದಲ್ಲಿ ರಾಜ್ಯಾದ್ಯಂತ ಎಲ್ಲಾ ಜಾತಿ ಸಮುದಾಯಗಳಲ್ಲಿ ಕಡು ಬಡವರಿಗೆ ಸರಿ ಸಮನಾಗಿ ಅನ್ವಯವಾಗುವಂತೆ ಯೋಜನೆಗಳನ್ನು ಹಮ್ಮಿಕೊಳ್ಳುವುದು ಗಮನದಲ್ಲಿದೆಯೇ ,

ಇ) ಹಾಗಿದ್ದಲ್ಲಿ, ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳುತ್ತದೆ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಹೌದು

ಇ) ಮೀಸಲಾತಿ ಅವಕಾಶವು ನ್ಯಾಯ ಸಮ್ಮತವಾಗಿ ದೊರೆಯದಿರುವ ಕರ್ನಾಟಕ ರಾಜ್ಯದ ಅನುಸೂಚಿತ ಜಾತಿಗಳ ನಿರ್ದಿಷ್ಟ ಜಾತಿಗಳು, ಜನಾಂಗಗಳು ಹಾಗೂ ಬುಡಕಟ್ಟುಗಳನ್ನು ಗುರುತಿಸುವುದಕ್ಕಾಗಿ ಈಗಾಗಲೇ ನಿವೃತ್ತ ನ್ಯಾಯಮೂರ್ತಿ ಎ ಜೆ ಸದಾಶಿವ ವಿಚಾರಣಾ ಆಯೋಗವನ್ನು ರಚಿಸಿದ್ದು, ಆಯೋಗವು ನೀಡುವ ವರದಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತೆ ಸರ್ಕಾರವು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವನ್ನು ರಚಿಸಿದ್ದು, ಪ್ರಸ್ತುತ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡುವ ವಿಷಯ ಪರಿಶೀಲನೆಯಲ್ಲಿದ್ದು, ನೇಮಕವಾದ ನಂತರ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮನೆಮನೆ ಸಮೀಕ್ಷಾ ಕಾರ್ಯವನ್ನು ನಡೆಸಿ ಆಯೋಗವು ನೀಡುವ ವರದಿಯನ್ವಯ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು

100 (168) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿಗ್ಗಾಂವ್ ತಾಲ್ಲೂಕಿನ ಬಂಕಾಮರ ಪಟ್ಟಣದ ಖಿಲಾರಿ ತಳಿ ಸಂವರ್ಧನ ಕೇಂದ್ರದಲ್ಲಿ ಹಾಗೂ ಕೋಟೆ ಆವರಣದಲ್ಲಿ ಜಾನುವಾರುಗಳಿಗೆ ಕೊಟ್ಟಿಗೆ ಕೊರತೆ, ರಸ ಮೇವಿನ ಗುಂಡಿಗಳು ಹಾಳಾಗಿ ಹೋಗಿರುವುದು ಮತ್ತು ಮೇವು ಸಂಗ್ರಹಕ್ಕೆ ಚಾವಣಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂಕಾಮರ ಕೋಟೆ ಆವರಣದಲ್ಲಿ 120 ಜಾನುವಾರುಗಳಿದ್ದರೂ ಕೇವಲ 90X30 ಅಡಿ ಅಳತೆಯ ಒಂದು ಕೊಟ್ಟಿಗೆ ಹಾಗೂ 20X30 ಅಡಿ ಅಳತೆಯ ಎರಡು ಸಣ್ಣ ಕೊಟ್ಟಿಗೆಗಳು ಮಾತ್ರ ಇರುವುದರಿಂದ ಜಾನುವಾರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ,